Reg No B G 155 11 — 6 — 72

55th Year of Publication ‘Satyavadi’ daily, Mysore 4

In the State - The First
Golden Jubilee
Celebrated Paper
★
News, Views, Dharmic
Moral Ethical Matters

ಸತ್ಯವಾದಿ

ರಾಜ್ಯದಲ್ಲಿ ಪ್ರಥಮ
ಸ್ವರ್ಣ
ಮಹೋತ್ಸವ
ಸಂಭ್ರಮಿಸಿದ
ಪತ್ರಿಕೆ

ಸ್ಥಾಪಕರು: ಅರಮನೆ ಸಿರಸ್ತೇದಾರ್ ಎಂ.ವಿ. ಸುಬ್ಬರಾವ್ ಸಂಪಾದಕರು: ಧರ್ಮಪ್ರಚಾರನಿರತ ಎಂ. ಎಸ್. ಕೃಷ್ಣರಾವ್ [2 ಪೈಸೆ

ಚಳುವಳಿ ಹೂಡಲು ಹಳೆಯ ಕಾಂಗ್ರೆಸ್ಸಿಯೋಚನೆ

37 ವರ್ಷದ ಹಿಂದಿನ ಖೂನಿ

ಜಾಕ್ಸನ್‌ವಿಲ್— 66 ವರ್ಷದ ಮತ್ತು ರೋಗಗ್ರಸ್ತನಾಗಿರುವ ಲೋನಿ ಕ್ರಾಸ್ ತಾನು 37 ವರ್ಷಗಳ ಹಿಂದೆ ಖೂನಿ ಮಾಡಿದ ಲಾರ್ಡ್ ಎಡ್ವರ್ಡ್ ಬುಸಿಯವರ ಪ್ರೇತ ಪ್ರೇರಣೆಯಂತೆ ಈಗ ಪೋಲೀಸರಿಗೆ ಶರಣಾಗತನಾಗಿದ್ದಾನೆ!— ಪೋಲೀಸರ ಸಾಕ್ಷ್ಯ ಶೇಖರಣೆಗೆ ಹವಣಿಸುತ್ತಿದ್ದಾರೆ.

ಕಳ್ಳ ಸಾಗಾಣಿಕೆಗೆ ಇಡಲಾಗಿತ್ತು

ಮಂಡ್ಯ— ಆಸಿಟೇಟ್ ಮತ್ತು ಕೆವಿ ಕಲ್ಸ್ ಕಂಪೆನಿ ಕಟ್ಟಡದಲ್ಲಿ ಮುಚ್ಚಿಡಲಾಗಿದ್ದ ರೂ 15000 ಬೆಲೆಯ ಎರಕದ ಪದಾರ್ಥವನ್ನು ಕೇಂದ್ರ ಎಕ್ಸೈಜಿನವರು ವಶಪಡಿಸಿಕೊಂಡರು — ಎಕ್ಸೈಜು ತೆರಿಗೆ ಕೊಡದೆ ಹೊರಕ್ಕೆ ಅಕ್ರಮ ಸಾಗಾಣಿಕೆಗಾಗಿ ಇಡಲಾಗಿತ್ತು.

★

ಸಭಾ ಪರಿತ್ಯಾಗ

ಷಿಲಾಂಗ್— ಡೆಪ್ಯೂಟಿ ಸ್ಪೀಕರರ ತೀರ್ಪನ್ನು ಪ್ರತಿಭಟಿಸಿ ಅಸ್ಸಾಂ ಶಾಸನಸಭೆಯ ವಿರೋಧ ಪಕ್ಷದ ಸದಸ್ಯರು ಸಭಾ ಪರಿತ್ಯಾಗ ಮಾಡಿದರು.

★

ಸ್ವೀಡನ್ನಿಗೆ ಪ್ರಧಾನಿ ಭೇಟಿ

ಸ್ಟಾಕ್‌ಹಾಂ — ಸ್ವೀಡನ್ನಿಗೆ ಭಾರತ ಪ್ರಧಾನಿ ಭೇಟಿ ಕೊಡುವುದು ಅತಿ ಮುಖ್ಯ ವಿಷಯವೆಂದು ಪ್ರಧಾನಿ ಓಲಾಫ್ ಪಾಲ್ಮೆ ಹೇಳಿದರು.

★

ಸ್ಮಾರಕ ಅಂಚೆಚೀಟಿ

ನವದೆಹಲಿ — ದೇಶದ ಸ್ವಾತಂತ್ರ್ಯದ ರಜತ ಮಹೋತ್ಸವ ಸಂದರ್ಭದಲ್ಲಿ ವಿಶೇಷವಿನೆದಪಿನ ಅಂಚೆಚೀಟಿ ಹೊರಡಿಸಲಾಗುವುದು.

ವಾಟಾಳ್ ಬೆದರಿಕೆ

ಕೇಂದ್ರ ಸರ್ಕಾರ ಮಹಾಜನ ಆಯೋಗದ ವರದಿಯನ್ನು ಜಾರಿ ಮಾಡದಿದ್ದರೆ ಚಳವಳಿ ಹೂಡುವುದಾಗಿ ಕನ್ನಡ ಚಳುವಳಿಗಾರರ ನಾಯಕರಾದ ಶ್ರೀ ವಾಟಾಳ್ ನಾಗರಾಜ್‌ರವರು ತಿಳಿಸಿದರು ಮುಂದೆ ರಾಜ್ಯದಲ್ಲಿ ಕೇಂದ್ರದ ಎಲ್ಲ ತೆರಿಗೆಗಳನ್ನು ನಿಲ್ಲಿಸುವ ಚಳುವಳಿ ಹೂಡಲಾಗುವುದಾಗಿ ತಿಳಿಸಿ, ಕೇಂದ್ರ ಮಂತ್ರಿಗಳಿಗೆ ಘೇರಾವ್ ಮಾಡುವದಾಗಿ ತಿಳಿಸಿದರು ಕೇಂದ್ರದಲ್ಲಿರುವ ಮೈಸೂರು ರಾಜ್ಯದ ಮಂತ್ರಿಗಳ ರಾಜೀನಾಮೆಗೆ ಒತ್ತಾಯ ಹೂಡುವದಾಗಿ ಅವರು ತಿಳಿಸಿದರು ಕೇಂದ್ರ ಕಚೇರಿಗಳು, ರಸ್ತೆಗಳು ಇವುಗಳಲ್ಲಿ ಪಿಕೆಟಿಂಗ್ ಹಾಗೂ ರೈಲು ಸತ್ಯಾಗ್ರಹ ಮಾಡಲಾಗುವುದೆಂದು ತಿಳಿಸಿದರು.

★

ಇದೊಂದು ಆಪಾದನೆ

ನವದೆಹಲಿ— ಭಾರತ—ಪಾಕ್ ಯುದ್ಧ ಬಹಳ ಕಾಲದ ಹಿಂದೆಯೇ ನಿಂತಿದ್ದರೂ, ಭಾರತವು ಯುದ್ಧ ಖೈದಿಗಳನ್ನೂ ಸರಕಾರಿ ಅಧಿಕಾರಿಗಳನ್ನೂ ಇನ್ನೂ ಬಿಟ್ಟಿಲ್ಲವೆಂದು ಜಿನಿವಾದಲ್ಲಿ ನಡೆದ ಸರಕಾರಿ ನಿಪುಣರ ಸಮ್ಮೇಳನದಲ್ಲಿ ಪಾಕ್ ನಿಯೋಗದ ನಾಯಕ ನಾಸಿಂ ಹುಸಿಂ ಷಾ ಹೇಳಿದರು.

●

ರೈಲ್ವೆ ಅವಘಡ — ಸಾವು

ಸುಜಾನೋ ಹತ್ತಿರ ಎರಡು ರೈಲುಗಳು ಡಿಕ್ಕಿ ಹೊಡೆದು ಹದಿನಾರು ಮಂದಿ ಸತ್ತರು.

★

ಭಾರತ ಟೆನೀಸ್ ಆಟಗಾರ

ನಾಟಿಂಗ್‌ಹ್ಯಾಂ— ಭಾರತದ ಟೆನೀಸ್ ಆಟಗಾರ ಪ್ರೇಮಜಿತ್ ಲಾಲರು ರಿಚರ್ಡ್ ಡೆಲ್‌ನನ್ನು ಸೋಲಿಸಿ, ರೂ. 2 15 ಲಕ್ಷದ ಜಾರ್ ಪ್ಲೇಯರ್ ಸುತ್ತಿನಲ್ಲಿ ಫೈನಲ್ಸ್‌ಗೆ ಬಂದಿದ್ದಾರೆ.

ಹಳೇ ಕಾಂಗ್ರೆಸ್ಸಿನ ಯೋಚನೆ

ನವದೆಹಲಿ— ಅಡಳಿತ ಸಕ್ಷಮತೆ ತಪ್ಪುಗಳನ್ನು ಹೊರಪಡಿಸಲು ಹಳೇ ಕಾಂಗ್ರೆಸ್ಸು ಪ್ರದರ್ಶನಗಳನ್ನೂ, ರ್ಯಾಲಿಗಳನ್ನೂ ನಡೆಸುವುದರ ಜೊತೆಗೆ, ವಿಶೇಷ ಪರಿಸ್ಥಿತಿಯಲ್ಲಿ ಸತ್ಯಾಗ್ರಹವನ್ನೂ ಕೈಗೊಳ್ಳುವುದೆಂದು ಪಾರ್ಟಿ ಅಧ್ಯಕ್ಷ ಶ್ರೀ ನಾಡಿಕ್ ಆಲಿ ಹೇಳಿರುವರು.

★

ಬಾಂಬು ದಾಳಿ

ಚೀನಾಕ್ಕೆ ಮೂವತ್ತೆರಡು ಕಿಲೋ ಮೀಟರು ಹತ್ತಿರ ಇರುವ ಉತ್ತರ ವಿಯೆಟ್ನಾಂ ಭಾಗಗಳ ಮೇಲೆ ಅಮೇರಿಕ ವಿಮಾನಗಳು ಬಾಂಬು ದಾಳಿ ನಡಾಡಿವೆ.

★

ಸಚಿವೆಯವರ ಅತೃಪ್ತಿ

ಮಂಡ್ಯ— ರಾಜ್ಯದಲ್ಲಿ ಸಹಕಾರ ಸಂಸ್ಥೆಗಳ ಕಾರ್ಯಗಳು ಪೂರ್ಣ ಅತೃಪ್ತಿಕರಗಳಾಗಿವೆಯೆಂದು ಆಹಾರ ಸಚಿವೆ ಶ್ರೀ ಶ್ರೀ ಈನಾ ನಾಜ್ ಅಭಿಸ್ಯಾಯಪಟ್ಟರುವರು

★

ಹರತಾಳ

ಗುಲ್ಬರ್ಗ— ಶ್ರೀ ಶರಣಬಸವೇಶ್ವರ ದೇವಾಲಯವನ್ನು ವಹಿಸಿಕೊಳ್ಳುವ ಸರಕಾರದ ನಿರ್ಧಾರವನ್ನು ಪ್ರತಿಭಟಿಸಿ ಶುಕ್ರವಾರ ಇಲ್ಲಿ ಹರತಾಳ ಆಚರಿಸಲಾಯಿತು.

★

ಹಾಲಿನ ಉತ್ಪಾದನೆ

ಬೆಂಗಳೂರು— ರಾಷ್ಟ್ರೀಯ ವ್ಯವಸಾಯ ಕವಿರ್ಷ ದೇಶದಲ್ಲಿ ಹಾಲಿನ ಉತ್ಪಾದನೆ ಹೆಚ್ಚಿಸಲು, ಪಶುಸಂಪತ್ತಿನ ಅಭಿವೃದ್ಧಿಗೆ ಶಿಫಾರಸ್ಸು ಮಾಡಿರುವ 107 ಜಿಲ್ಲೆಗಳಲ್ಲಿ ಮೈಸೂರಿನ ಮೂರು ಜಿಲ್ಲೆಗಳೂ ಸೇರಿವೆ.

ಕೆನಡಾ ಸಾಲ

ನವದೆಹಲಿ— ಕೆನಡಾವು ಭಾರತಕ್ಕೆ ರೂ 35 7 ಕೋಟಿ ಅಭಿವೃದ್ಧಿ ಸಾಲ ನೀಡಿದೆ.

★

ಕಂದಕ ತೋಡಿಕೊಂಡು ಪರಾರಿ

ಕೊಲಂಬೊ— ಇಲ್ಲಿಯ ಸ್ಥಾನಬದ್ಧತ ಕೇಂದ್ರದಲ್ಲಿ ಇಡಲಾಗಿದ್ದ ದಂಗೆಕೋರರಲ್ಲಿ 20 ಕ್ಕಿಂತ ಹೆಚ್ಚು ಮಂದಿ ಭೂಮಿಯಲ್ಲಿ ಸುರಂಗಮಾರ್ಗ ತೋಡಿಕೊಂಡು ಪರಾರಿಯಾಗಿದ್ದಾರೆ.

○

ಗಂಧದ ಮರ ವಶ

ಶಿವಮೊಗ್ಗ— ಅಕ್ರಮ ಸಾಗಾಣಿಕೆಗಾರರು ಬಿಟ್ಟುಹೋಗಿದ್ದ ರೂ 50 ಲಕ್ಷ ಬೆಲೆಯ ಗಂಧದ ಮರ ವಶಪಡಿಸಿಕೊಳ್ಳಲಾಗಿದೆ, ಇನ್ನೂ ತನಿಖೆ ನಡೆಸಲಾಗುತ್ತಿದೆ ಎಂದು ಅರಣ್ಯ ಮಂತ್ರಿ ಶ್ರೀ ಕೆ. ಹೆಚ್ ಪಾಟೀಲರು ಪತ್ರಿಕೆಯವರಿಗೆ ತಿಳಿಸಿದರು ; ಮಂತ್ರಿಗಳವರು ಸರ್ಕಾರಿ ಮರದ ಕೈಗಾರಿಕಾ ಸಂಸ್ಥೆಗೆ ಭೇಟಿ ಕೊಟ್ಟಿದ್ದರು.

ಬರ್ನಾರ್ಡ್ ಷಾರ ಪ್ರೇಮಪತ್ರ

ಜಾರ್ಜ್ ಬರ್ನಾರ್ಡ್ ಷಾರವರು ಒಬ್ಬ ಸುಂದರಿಯಾದ ನರ್ಸ್‌ಗೆ (1883-85) ಬರೆದಿದ್ದ ಪ್ರೇಮಪತ್ರವು ಹರಾಜಿನಲ್ಲಿ ರೂ 30600 ಕ್ಕೆ ಮಾರಲಾಯಿತು.

ಕುಡಿತಕ್ಕೆ ಕಾಶಾ ಪ್ರಹಾರ

ರಾವಲ್ಪಿಂಡಿ— ಪಾನನಿರೋಧ ಉಲ್ಲಂಘಿಸಿದವರಿಗೆ 6 ತಿಂಗಳ ಸಜಾ ಅಷ್ಟೇನೂ ತೀಕ್ಷ್ಣವಲ್ಲ ; ಇಸ್ಲಾಂ ಪ್ರಕಾರ ಕುಡಿತಕ್ಕೆ 80 ಕಾಶಾಪ್ರಹಾರವಿದೆ : ನಮ್ಮ ಸರಕಾರ ಈ ವಿಷಯ ಪರ್ಯಾಲೋಚಿಸುತ್ತಿದೆ ಎಂದು ವಾಯವ್ಯಗಡಿ ಪ್ರಾಂತ್ಯದ ಇಸ್ಲಾಂ ಮುಖ್ಯ ಮಂತ್ರಿ ಮೌಲಾನಾ ಮುಫ್ತಿ ಮಹಮದ್ ಹೇಳಿದರು.

ದಿವ್ಯವಾಣಿ

ಗುಣವಿದ್ದರೂ ಗುಣವಂತ ವ್ಯಕ್ತಿಗಳ ಬೆಂಬಲ ಸಿಗದಿದ್ದರೆ, ಗುಣವಂತ ವ್ಯಕ್ತಿಯು ಹಿಂದೆ ಬೀಳುತ್ತಾನೆ ; ಆ ಮೂಲ್ಯ ಮಾಣಿಕ್ಯವನ್ನು ಕೂಡಿಸಲು ಭಂಗಾರದ ಆಗತ್ಯ ಇದ್ದೇಇರುತ್ತದೆ – ಸುಭಾಷಿತ

★

ತೀವ್ರ ಕ್ಷಾಮ

ಗುಲ್ಬರ್ಗಾದಿಂದ ಬಂದಿರುವ ವರದಿಯ ಪ್ರಕಾರ, ಚಿಂಚೋಲಿ ತಾಲ್ಲು ತೀವ್ರ ಕ್ಷಾಮಕ್ಕೆ ತುತ್ತಾಗಿದೆ ಎಂದು ರಿಪಬ್ಲಿಕ್ ಪಾರ್ಟಿ ಕಾರ್ಯದರ್ಶಿ ಶ್ರೀ ಶಿವರಾಂ ಮೋಘೆ ಹೇಳಿಕೆಯಿತ್ತರು.

★

1500 ದಸ್ತಗಿರಿಗಳು

ತಿರುವನಂತಪುರಂ— 16 ನೇ ದಿನವಾದ ಶುಕ್ರವಾರ ಭೂಮಿ ಆಕ್ರಮಣ ಚಳವಳಿಯಲ್ಲಿ 1500 ಮಾರಕ್ಸಿಸ್ಟ್ ಪರವಾದ ಸ್ವಯಂಸೇವಕರು ರಾಜ್ಯಾದ್ಯಂತ ಭೂಮಿ ಆಕ್ರಮಣ ಚಳವಳಿಯಲ್ಲಿ ದಸ್ತಗಿರಿಗೆ ಮುಂದಾಗಿ ಬಂದರು.

ಡಾಕ್ಟರರ ಮೇಲೆ ಮೊಖದ್ದಮೆ

ಸಿಡ್ನಿ— ನಿಕಿ ಪಾಪಾಪಿಯೊನೊವುಲ್ಲಾಸ್ 6 ವರ್ಷಗಳ ಹಿಂದೆ ಬಿತೀಡಾ ಆಸ್ಪತ್ರೆಯಲ್ಲಿ ಗಂಡು ಶಿಶು ಹೆತ್ತಾಗ ನಡೆಸಿದ ಆಪರೇಷನ್ನಿನಲ್ಲಿ 15 ಸಿಎಂ ಇಕ್ಕಳ ದೇಹದೊಳಗೇ ಸೇರಿದ್ದುದು ಈಗ ಗೊತ್ತಾಗಿ, ಆಪರೇಷ್ ನಡೆಸಿದ ಡಾಕ್ಟರು ಮತ್ತು ಆಸ್ಪತ್ರೆಯ ಟ್ರಸ್ಟ್‌ನವರ ಮೇಲೆ ಮೊಖದ್ದಮೆ ಹೂಡಲಿರುವಳು.

ಗೋಧಿ ಶೇಖರಣೆ

ನವಡೆಹಲಿ— ಈ ರಾಬಿಋತುವಿನಲ್ಲಿ ಫುಡ್ ಕಾರ್ಪೊರೇಷ್ನ, ರಾಜ್ಯ ಸರಕಾರಗಳೂ ಮತ್ತು ಸಹಕಾರ ಮಾರುಕಟ್ಟೆ ಸಂಘಗಳೂ ಇಲ್ಲಿವರೆಗೆ 4.4 ಮಿಲಿಯನ್ ಟನ್ ಗೋಧಿ ಕೊಂಡುಕೊಂಡಿವೆ.

ರಾಯನಕೆರೆ ಡೈರಿ ಫಾರಂ

ಬೆಂಗಳೂರು — ಮೈಸೂರಿನಲ್ಲಿರುವ ಅರಮನೆಯ ರಾಯನಕೆರೆ ಡೈರಿ ಫಾರಂ ಅನ್ನು ಸರಕಾರ ವಹಿಸಿಕೊಳ್ಳುವ ಯೋಜನೆ ನಡೆಯುತ್ತಿದೆ.

Contribute Liberally

to the National Defence Fund

ವುಡ್‌ಲ್ಯಾಂಡ್ 9-6-72ರಿಂದ ಅಮೋಘ 6 ನೇ ವಾರ

.... ಚಿತ್ತಾಕರ್ಷ ಕನ್ನಡ ಚಿತ್ರ ....

ಹೃದಯ ಸಂಗಮ

ನಟಸಾರ್ವಭೌಮ ರಾಜಕುಮಾರ್, ಭಾರತಿ, ಬಾಲಕೃಷ್ಣ, ಅಶ್ವತ್ಥ್, ಹಂಡಿಕಾಚಾರ್
ನಿರ್ದೇಶನ: ರಾಜಶ್ರೀ ಸಹೋದರರು ನಿರ್ಮಾಪಕರು: ಎಂ ಜಿ ಎಂ ಸಹೋದರರು
ಪ್ರತಿ ದಿನ 3 ಪ್ರದರ್ಶನಗಳು

ಬೆಳಗಿನ ಪ್ರದರ್ಶನ ಪ್ರತಿ ದಿನ 10-30 ಸಿಂಹಸ್ವಪ್ನ

ಅಪೆರಾ 9 6 72 ರಿಂದ

.... ಮನಮೋಹಕ ತಮಿಳು ಚಿತ್ರ ....

ಕರುಂದೇಲ್ ಕಣ್ಣಾಯಿರಂ

ಪಾತ್ರ— ಜೈ ಶಂಕರ್ (ದ್ವಿಪಾತ್ರದಲ್ಲಿ), ಲಕ್ಷ್ಮಿ, ಶಕುಂತಳಾ, ಮನೋಹರ್
ತೆಂಗಾಯಿ ಶ್ರೀನಿವಾಸ, ಮನೋರಮ
ದಿನ 3 ಆಟಗಳು

Edited Printedand Published by Dharmapracharanirata
M S Krishna Rao (Propretor) at the Satvavadi Press
Chamarajapuram Mysore 4

'ಮಾನವನು ಕೀಳು ಸೃಷ್ಟಿಯ ಧಣಿ, ಶ್ರಿಷ್ಠನೆನ್ನುವುದು ಸೊಕ್ಕಿನ' ಕಲ್ಪನೆ'
ಬದುಕಿಗೆ ಮಹತ್ ಶಕ್ತಿ ಕೊಡಲ್ಪಟ್ಟ ಅವನು ಮೃಗಸಾಮ್ರಾಜ್ಯದ ಧರ್ಮಕರ್ತ
— ಮಹಾತ್ಮಾ ಗಾಂಧಿ

ಈ ಸಂದೇಶ ಹೊತ್ತ ಚಿತ್ರ ಸಂದೇಶ್ ಕವರ ಚೊಚ್ಚಲು ಚಿತ್ರ

ಅನೆ - ಹುಡುಗ

SHAKTI

SUDHA

A Superb Tonic

ಅಖಿಲ ಭಾರತದಲ್ಲಿ ಕೂಡಲೇ

ಗೋವಧೆ ನಿಶೇಧವಾಗಲಿ

Quality . Printing Neat Binding

Lakshminarasimha Press

Sivarampet, Mysore

Help The Gorakshana



— Humanitarian Propoganda Monthly ....